**ಪಿ.ಡಬ್ಲ್ಯೂ ಃ 1 - ಹೇಮಂತ್ ಕುಮಾರ್**

**ಸಾಕ್ಷಿ ಗೆ ದಿನಾಂಕಃ 24.10.2024 ರಂದು ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲು: 2ನೇ ಎದುರುದಾರರ ಪರಃ ಶ್ರೀ ವಕೀಲರ ಮೂಲಕ ಃ**

ನಾನು ಮಳವಳ್ಳಿಯಿಂದ ಕೆ.ಪಿ. ದೊಡ್ಡಿಗೆ ಗ್ರಾಮಕ್ಕೆ ಹೋಗುತ್ತಿದ್ದಾಗ ಅಪಘಾತವಾಗಿರುತ್ತದೆ. ನಾನು ಮಳವಳ್ಳಿಯನ್ನು ಬಿಟ್ಟಾಗ ಸುಮಾರು ರಾತ್ರಿ **8-45** ರಿಂದ **9-00** ಗಂಟೆಯಾಗಿತ್ತು. ಅಪಘಾತವಾದಾಗ ರಾತ್ರಿ **9-00** ರಿಂದ **9-15** ಆಗಿತ್ತು. ಅಪಘಾತ ಸ್ಥಳದಿಂದ ಮಳವಳ್ಳಿ **5** ಕಿ.ಮೀ. ಅಂತರದಲ್ಲಿ ಇರುತ್ತದೆ. ಅಪಘಾತವಾದಾಗ ನಾನು ಒಬ್ಬನೇ ಬೈಕ್‌ನಲ್ಲಿ ಹೋಗುತ್ತಿದ್ದೆ. ನಾನು ವೇಗವಾಗಿ ಹೋಗಿ ನನ್ನ ತಪ್ಪಿನಿಂದ ಅಪಘಾತವಾಗಿರುತ್ತದೆ ಎಂದರೆ ಸರಿಯಲ್ಲ. ನಾನು ಲಾರಿಯ ಹಿಂಭಾಗಕ್ಕೆ ಡಿಕ್ಕಿ ಪಡಿಸಿರುತ್ತೇನೆ ಎಂದರೆ ಲಾರಿಯು ಏಕಾಏಕಿ ನಿಂತ ಕಾರಣ ನಾನು ಲಾರಿಗೆ ಡಿಕ್ಕಿ ಪಡಿಸಿರುತ್ತೇನೆ. ಲಾರಿಯ ಚಾಲಕನು ಸೂಚನೆ ನೀಡಿ, ನಿಲ್ಲಿಸಿದ್ದ ಲಾರಿಗೆ ನಾನೇ ಡಿಕ್ಕಿ ಪಡಿಸಿರುತ್ತೇನೆ ಎಂದರೆ ಸರಿಯಲ್ಲ. ನನ್ನ ನಿರ್ಲಕ್ಷತನದ ಚಾಲನೆಯಿಂದ ಅಪಘಾತವಾಗಿರುತ್ತದೆ ಎಂದರೆ ಸರಿಯಲ್ಲ. ಅಪಘಾತದ ಕಾಲಕ್ಕೆ ಚಾಲನಾ ಪರವಾನಿಗೆ ನನ್ನ ಬಳಿ ಇತ್ತು. ಸದರಿ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ನನಗೆ ತೊಂದರೆ ಇರುವುದಿಲ್ಲ. ಅಪಘಾತದ ಕಾಲಕ್ಕೆ ನನ್ನ ಬಳಿ ಚಾಲನಾ ಪರವಾನಿಗೆ ಇಲ್ಲದ ಕಾರಣ ನಾನು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ.

**2.** ನನಗೆ ಅಪಘಾತದಿಂಧ ಸಾಮಾನ್ಯ ಸ್ವರೂಪದ ಗಾಯಗಳಾಗಿದ್ದು, ತೀವ್ರ ಸ್ವರೂಪದ ಗಾಯಗಳು ಆಗಿಲ್ಲ ಎಂದರೆ ಸರಿಯಲ್ಲ. ನನಗೆ ಯಾವುದೇ ಶಸ್ತ್ರ ಚಿಕಿತ್ಸೆಯಾಗಿಲ್ಲ ಎಂದರೆ ಸರಿ. ನಾನು ಔಷದೋಪಚಾರಕ್ಕೆ **2** ಲಕ್ಷ ರೂಪಾಯಿಗಳಿಗಿಂತ ಹೆಚ್ಚು ಖರ್ಚು ಮಾಡಿದ್ದೆನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಶಸ್ತ್ರ ಚಿಕಿತ್ಸೆ ಮಾಡಿಸಲು ನನಗೆ **1** ಲಕ್ಷ ರೂಪಾಯಿ ಖರ್ಚಾಗುತ್ತದೆ ಎಂದು ಹೇಳುವುದು ಸುಳ್ಳು ಎಂದರೆ ಸರಿಯಲ್ಲ. **17.05.1995** ನನ್ನ ಹುಟ್ಟಿದ ದಿನಾಂಕವಾಗಿರುತ್ತದೆ.

**3.** ಈಗ ನೋಡುತ್ತಿರುವ ಆಧಾರ್ ಕಾರ್ಡ್ ನನ್ನದು ಎಂದರೆ ಸರಿ. ಸದರಿ ಆಧಾರ್ ಕಾರ್ಡನ ಜೆರಾಕ್ಸ್ ಪ್ರತಿಯನ್ನು ಸಾಕ್ಷಿ ಒಪ್ಪಿಕೊಂಡು ಕಾರಣ ಅದನ್ನು ನಿ.ಆರ್. **1** ಎಂದು ಗುರುತಿಸಲಾಯಿತು. ನಾನು ಕಬ್ಬಿಣದ ಕೆಲಸವನ್ನು ಅಪಘಾತಕ್ಕಿಂತ ಪೂರ್ವದಲ್ಲಿ ಮಾಡುತ್ತಿದ್ದೆ ಎಂದು ತೋರಿಸಲು ನನ್ನ ಬಳಿ ದಾಖಲೆ ಇರುವುದಿಲ್ಲ ಆದರೆ ನಾನು ಲೇಬರ್ ಕಾರ್ಡ್‌ನ್ನು ಮಾಡಿಸಲು ಅರ್ಜಿಯನ್ನು ನೀಡಿದ್ದು, ಆದರೆ ಅದನ್ನು ಪಡೆದಿರುವುದಿಲ್ಲ.

ನಾನು ಅಪಘಾತದ ಪೂರ್ವದಲ್ಲಿ ಯಾವುದೇ ಕೆಲಸವನ್ನು ಮಾಡುತ್ತಿರಲಿಲ್ಲ ಮತ್ತು **20** ಸಾವಿರ ರೂ.ಗಳನ್ನು ಸಂಪಾದನೆ ಮಾಡದೇ ಇದ್ದರು ಹೆಚ್ಚು ಪರಿಹಾರ ಪಡೆಯುವ ಉದ್ದೇಶದಿಂದ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅಪಘಾತದಿಂದ ನನಗೆ ಯಾವುದೇ ತೊಂದೆಯಾಗುವ ಗಾಯಗಳು ಆಗಿಲ್ಲ ಮತ್ತು ನಾನು ಮೊದಲಿನ ರೀತಿಯಲ್ಲಿಯೇ ಕೆಲಸ ಮಾಡುತ್ತಿದ್ದೆನೆ ಎಂದರೆ ಸರಿಯಲ್ಲ. ನಾನು ನಿಪಿ **7** ನ್ನು ಈ ಪ್ರಕರಣದ ಸಲುವಾಗಿ ಸೃಷ್ಟಿ ಮಾಡಿದ್ದೇನೆ ಎಂದರೆ ಸರಿಯಲ್ಲ. ನಿಪಿ **7** ಕ್ಕೆ ಪೂರಕವಾಗಿ ನಾನು ಸಲಹಾ ಚೀಟಿಗಳನ್ನು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ನಾನು ಆ ರೀತಿ ಸಲಹಾ ಚೀಟಿಗಳನ್ನು ಹಾಜರುಪಡಿಸದೇ ಇರುವುದರಿಂದ ನಿಪಿ **7** ನ್ನು ಸೃಷ್ಟಿ ಮಾಡಿ ಹಾಜರುಪಡಿಸಿರುತ್ತೆನೆ ಎಂದರೆ ಸರಿಯಲ್ಲ.

**1ನೇ ಎದುರುದಾರರು ಮತ್ತು ಅವರ ಪರ ವಕೀಲರು ಗೈರು ಹಾಜರಾಗಿದ್ದು, ಆದರಿಂದ 1ನೇ ಎದುರುದಾರರ ಪರ ವಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.**

ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು.

ಓ ಹೇ ಕೇ ಸ ಇದೆ
ಸಹಿ/-
ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಎಂ ಎ ಸಿ ಟಿ, ಮಳವಳ್ಳಿ.